# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರರಿಗಾಗಿ ವೈಯುಕ್ತಿಕ ಕೊಳವೆಬಾವಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಆದೇಶ.

ಓದಲಾಗಿದೆ:
1) ದಿನಾಂಕ: 5-2-99ರ ಸಂ: ಕೆಎಸ್‌ಸಿಎಸ್‌ಟಿಡಿಸಿ: ಜಿಕೆವಿ: ಇ-2: 98-99: 15621ರ ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಪತ್ರ.
2) ದಿನಾಂಕ: 1-6-99ರ ಸಂ: ಕ.ಅ.ನಿ: ಗಕಯೋ: 99-2000: 461ರ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಪತ್ರ.

ooooOoo

ಪ್ರಸ್ತಾವನೆ:

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳು ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ. ಈ ಯೋಜನೆಯಲ್ಲಿ ಒಂದೇ ಕಡೆ ಕನಿಷ್ಟ 8 ಎಕರೆಯಿಂದ 15 ಎಕರೆ ಜಮೀನಿನ ಹೊಂದಿಕೊಂಡಂತೆ ಇರುವ ಸಣ್ಣ ಮತ್ತು ಅತಿ ಸಣ್ಣ ಪರಿಶಿಷ್ಟ ಜಾತಿ/ಪರಿಶಿಷ್ಟ ಗಳು/ಹಿಂದುಳಿದ ವರ್ಗಗಳು/ಅಲ್ಪಸಂಖ್ಯಾತರ ಜಮೀನುಗಳನ್ನು ಗುರುತಿಸಿ ಎರಡು ಅಥವಾ ಮೂರು ಕೊಳವೆಬಾವಿಗಳನ್ನು ಕೊರೆಸಿ ಪಂಪುಸೆಟ್ಟುಗಳನ್ನು ಅಳವಡಿಸಿ ವಿದ್ಯುದೀಕರಿಸುವ ಮೂಲಕ ಸಾಮೂಹಿಕ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಈ ಯೋಜನೆಯ ತಗಲುವ ಎಲ್ಲಾ ವೆಚ್ಚವನ್ನು ಮೇಲಿನ ನಿಗಮಗಳೇ ಭರಿಸುತ್ತಿವೆ.

ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ವೈಯುಕ್ತಿಕ ಕೊಳವೆ ಬಾವಿ ಯೋಜನೆ ಎಂಬ ಇನ್ನೊಂದು ಯೋಜನೆಯನ್ನು ಸಹ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯಡಿ ಡಿ.ಪಿ.ಎ.ಪಿ. ಅಲ್ಲದ ಪ್ರದೇಶಗಳಲ್ಲಿ ಎರಡು ಎಕರೆಗೆ ಮೇಲ್ಪಟ್ಟು ಮತ್ತು 5 ಎಕರೆ ಒಳಗೆ ಇರುವ ಹಾಗೂ ಡಿ.ಪಿ.ಎ.ಪಿ. ಪ್ರದೇಶದಲ್ಲಿ 7.5 ಎಕರೆ ತನಕ ಜಮೀನನ್ನು ಹೊಂದಿರುವ ವೈಯುಕ್ತಿಕ ಫಲಾನುಭವಿಯ ಜಮೀನಿನಲ್ಲಿ ಒಂದು ಕೊಳವೆಬಾವಿ ಕೊರೆದು ಪಂಪುಸೆಟ್ಟನ್ನು ಅಳವಡಿಸಿಕೊಡಲಾಗುತ್ತಿದೆ. ಆದರೆ ಇದಕ್ಕೆ ತಗಲುವ ವಿದ್ಯುದೀಕರಣ ವೆಚ್ಚವನ್ನು ನಿಗಮವು ಭರಿಸುತ್ತಿಲ್ಲ. ಈ ಹಿಂದೆ ಈ ಯೋಜನೆಯನ್ನು ಶೇಕಡ 75ರಷ್ಟು ಸಹಾಯಧನದಿಂದ ಹಾಗೂ ಶೇಕಡ 25ರಷ್ಟು ಫಲಾನುಭವಿಗಳು ಬ್ಯಾಂಕಿನಿಂದ ಅಥವಾ ಇನ್ನಿತರ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿತ್ತು. ಗಂಗಾ ಕಲ್ಯಾಣ ಯೋಜನೆ ಜಾರಿಗೆ ಬಂದ ನಂತರ ಈ ಯೋಜನೆಯಡಿಯೂ ಪೂರ್ಣ ಘಟಕ ವೆಚ್ಚ ಅಂದರೆ ರೂ.65,000ಗಳನ್ನು ನಿಗಮವೇ ಭರಿಸುತ್ತಿದೆ.

ನಬಾರ್ಡ್ ಸಂಸ್ಥೆಯು ಕಪ್ಪು ಮತ್ತು ಗ್ರೇ ಪ್ರದೇಶಗಳಲ್ಲಿ ಕೊಳವೆಬಾವಿಗಳನ್ನು ಕೊರೆಯಬಾರದೆಂದು ಮತ್ತು ಎರಡು ಕೊಳವೆಬಾವಿಗಳ ನಡುವಿನ ಅಂತರ 625 ಅಡಿ ದೂರವಿರಬೇಕೆಂದು ವಿಧಿಸಿರುವ ಷರತ್ತುಗಳನ್ನು ದಿನಾಂಕ: 12-3-97ರ ಸಂಖ್ಯೆ: ಸಕಇ 115 ಎಸ್‌ಎಡಿ 95ರ ಸರ್ಕಾರ ಆದೇಶದಲ್ಲಿ ಈ ಯೋಜನೆಗೆ ಅನ್ವಯಿಸುವುದಿಲ್ಲವೆಂದು ಆದೇಶಿಸಿದೆ.

ಹಿಂದುಳಿದ ವರ್ಗಗಳು/ಅಲ್ಪಸಂಖ್ಯಾತರಿಗೆ ಸೇರಿದ ಜಮೀನುಗಳು ಒಂದೇ ಕಡೆ 8 ರಿಂದ 15 ಎಕರೆಯವರೆಗೆ ಅತ್ಯಲ್ಪವಾಗಿರುವ ಕಾರಣ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವಲ್ಲಿ ಹಾಗೂ ಬಜೆಟ್‌ನ ಪ್ರಗತಿ ಸಾಧಿಸುವಲ್ಲಿ ತೊಂದರೆಯಾಗುತ್ತಿರುವುದರಿಂದ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳು ಸರ್ಕಾರಕ್ಕೆ ವರದಿ ಮಾಡುತ್ತಾ, ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿರುವಂತೆ ವೈಯುಕ್ತಿಕ ಕೊಳವೆಬಾವಿ ನೀರಾವರಿ ಯೋಜನೆಯನ್ನು ತಮ್ಮ ನಿಗಮಗಳಲ್ಲೂ ಜಾರಿಗೆ ತರಲು ಸರ್ಕಾರದ ಅನುಮತಿಯನ್ನು ಕೋರಿರುವರು. ಈ ಯೋಜನೆಗಾಗಿ ಆಯವ್ಯಯದಲ್ಲಿ ಯಾವುದೇ

ಹಣವನ್ನು ಒದಗಿಸಿಕೊಳ್ಳದೆ ಇರುವ ಪ್ರಯುಕ್ತ ಈ ಎರಡೂ ನಿಗಮಗಳಿಗೆ ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನಕ್ಕಾಗಿ ಒದಗಿಸಿಕೊಂಡಿರುವ ಮೊತ್ತದಲ್ಲಿ ಶೇಕಡ 50ರಷ್ಟನ್ನು ವೈಯುಕ್ತಿಕ ಕೊಳವೆಬಾವಿ ನೀರಾವರಿ ಯೋಜನೆಗೆ ಉಪಯೋಗಿಸಿಕೊಳ್ಳಲು ಸಹ ಅವರು ಸರ್ಕಾರದ ಅನುಮತಿಯನ್ನು ಕೋರಿರುವರು.

ವೈಯುಕ್ತಿಕ ಕೊಳವೆಬಾವಿ ನೀರಾವರಿ ಯೋಜನೆಗೆ [illegible] ಅವಕಾಶವನ್ನು ಕಲ್ಪಿಸಿಕೊಳ್ಳದೇ ಇರುವ ಪ್ರಯುಕ್ತ ಗಂಗಾ ಕಲ್ಯಾಣ ಯೋಜನೆಗೆ ಒದಗಿಸಿಕೊಂಡಿರುವ ಮೊತ್ತದಲ್ಲಿ ಶೇಕಡ 50ರಷ್ಟನ್ನು ಈ ಯೋಜನೆಗೆ ಉಪಯೋಗಿಸಿಕೊಳ್ಳಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸಹ ಕೋರಿರುವರು. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 46 ಎಸ್‌ಡಿಸಿ 99 ಬೆಂಗಳೂರು, ದಿನಾಂಕ: 7-10-1999**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2ಎ ಹಾಗೂ ಅಲ್ಪಸಂಖ್ಯಾತರ ವರ್ಗದ ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಸಲುವಾಗಿ ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವುಗಳಿಗೆ ಅನುಮತಿ ನೀಡಿದೆ. ಈ ನಿಗಮ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಗಂಗಾ ಕಲ್ಯಾಣ ಯೋಜನೆಗಾಗಿ ಒದಗಿಸಿಕೊಂಡಿರುವ ಯೋಜನೆಯನ್ನು ಅನುಷ್ಠಾನಗೊಳಿಸಲು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದೆ ಹಣದಿಂದ ಶೇಕಡ 50ಕ್ಕೆ ಮೀರದಂತೆ ಮೊತ್ತವನ್ನು ಉಪಯೋಗಿಸಿಕೊಳ್ಳಲು ಅನುಷ್ಠಾನಗೊಳಿಸಲಾಗದಂತಹ ಜಮೀನುಗಳಿಗೆ ಮಾತ್ರ ಮತ್ತು ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗದಂತಹ ಈ ಯೋಜನೆಯನ್ನು ಸೀಮಿತಗೊಳಿಸತಕ್ಕದ್ದು.

ಗಂಗಾ ಕಲ್ಯಾಣ ಯೋಜನೆಗಾಗಿ ಒದಗಿಸಿಕೊಂಡಿರುವ ಮೊತ್ತದಿಂದ ಶೇಕಡ 50ಕ್ಕೆ ಮೀರದಂತೆ ಹಣವನ್ನು ವೈಯುಕ್ತಿಕ ಕೊಳವೆಬಾವಿ ಯೋಜನೆಯ ಅನುಷ್ಠಾನಕ್ಕಾಗಿ ಉಪಯೋಗಿಸಿಕೊಳ್ಳಲು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಅನುಮತಿ ನೀಡಿದೆ.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಸಕಇ 151 ಪಕವಿ 95 ದಿನಾಂಕ: 7-3-96ರಲ್ಲಿ ರಚಿಸಲಾಗಿರುವ ಅಧಿಕಾರಪ್ರತ್ಯಾಯೋಜನೆ ನಿಯಮದಂತೆ ಅನುಮೋದನೆ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಸಹಿ
(ಎಂ.ಎಸ್. ವಿಜೇಂದ್ರ ರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, – ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವ ಸಲುವಾಗಿ.

ಪ್ರತಿ ಧೃಢೀಕರಣ
ವ್ಯವಸ್ಥಾಪಕ ನಿರ್ದೇಶಕರು.